ಇ) ಆ ರೈತರಿಗೆ ಇದುವರೆಗೆ ಪಾವತಿ ಮಾಡಿದ ಹಣ ಎಷ್ಟು?

ಈ) ಇನ್ನು ಪಾವತಿ ಆಗಬೇಕಾಗಿರುವ ಹಣವೆಷ್ಟು?

ಶ್ರೀ ಉಮೇಶ್ ವಿ. ಕತ್ತಿ (ಸಕ್ಕರೆ ಸಚಿವರು) :

ಅ) ಹೌದು.

ಆ) 23,320 ಮೆ.ಟನ್.

ಇ) ಟನ್ ಒಂದಕ್ಕೆ ರೂ. 791.79ರಂತೆ ಹಣ ಪಾವತಿ ಮಾಡಲಾಗಿದೆ.

ಈ) ಟನ್ ಒಂದಕ್ಕೆ ರೂ.103.00 ರಂತೆ ಒಟ್ಟು 24.00 ಲಕ್ಷ ರೂ. ಪಾವತಿಯಾಗಬೇಕಾಗಿರುತ್ತದೆ.

ಮಂಚನಬೆಲೆ ಯೋಜನೆಯ ಕಾಮಗಾರಿ ವಿಳಂಬ

2245 - ಶ್ರೀ ಹೆಚ್.ಸಿ. ಬಾಲಕೃಷ್ಣ (ಮಾಗಡಿ) : ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಾಗಡಿ ಪಟ್ಟಣಕ್ಕೆ ಕುಡಿಯುವ ಯೋಜನೆಯಾದ ಮಂಚನಬೆಲೆ ಯೋಜನೆಯು ಅತ್ಯಂತ ಮಂದಗತಿಯಲ್ಲಿ ನಡೆಯುತ್ತಿರುವುದಕ್ಕೆ ಕಾರಣಗಳೇನು? ಈ ಯೋಜನೆಯನ್ನು ತೀವ್ರಗೊಳಿಸಲು ಸರ್ಕಾರವು ಕ್ರಮಕೈಗೊಳ್ಳುವುದೆ?

ಆ) ಈವರೆಗೆ ಈ ಯೋಜನೆಗೆ ಎಷ್ಟು ಹಣ ಖರ್ಚು ಮಾಡಲಾಗಿದೆ? (ವಿವರ ನೀಡುವುದು)

ಇ) ಸದರಿ ಯೋಜನೆಯ ಕಾಮಗಾರಿಗಳನ್ನು ಡಿಸೆಂಬರ್ 1998ರ ವೇಳೆಗ ಪೂರೈಸಲು ಸರ್ಕಾರವು ಕ್ರಮ ಕೈಗೊಳ್ಳವುದೇ?

ಶ್ರೀ ಬಿ.ಎನ್. ಬಚ್ಚೇಗೌಡ (ನಗರಾಭಿವೃದ್ಧಿ ಸಚಿವರು) :

ಅ) ಮಾಗಡಿ ಮತ್ತು ರಾಮನಗರ ಪಟ್ಟಣಗಳಿಗೆ ಮಂಚನಬೆಲೆ ಜಲಾಶಯವನ್ನು ಮೂಲವಾಗಿಟ್ಟುಕೊಂಡು ಒಂದು ಜಂಟಿಯೋಜನೆಯ ಕಾಮಗಾರಿಗಳು ಪ್ರಗತಿಯಲ್ಲಿದ್ದಾಗ, ರಾಮನಗರಕ್ಕೆ ಈ ಜಲಾಶಯದಿಂದ ನೀರೊದಗಿಸಲಾರದೆಂದು ರೈತರು ನ್ಯಾಯಾಲಯದ ತಡೆಯಾಜ್ಞೆ ತಂದ ಕಾರಣ, ಮಾಗಡಿ ಪಟ್ಟಣಕ್ಕೆ ನೀರು ಸರಬರಾಜು ಮಾಡುವ ಯೋಜನೆಯು ವಿಳಂಬವಾಯಿತು. ಈ ಯೋಜನೆಯನ್ನು ತೀವ್ರಗೊಳಿಸಲು ಈಗಾಗಲೇ ಕ್ರಮತೆಗೆದುಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿವೆ.

ಆ) ಈವರೆಗೆ ರೂ. 88.64 ಲಕ್ಷ ಹಣ ಖರ್ಚು ಮಾಡಲಾಗಿದೆ.

ಇ) ಸದರಿ ಯೋಜನೆಯ ಕಾಮಗಾರಿಗಳನ್ನು ಡಿಸೆಂಬರ್ 1998ರ ವೇಳೆಗೆ ಪೂರೈಸಲು ಈಗಾಗಲೇ ಕ್ರಮ ಕೈಗೊಳ್ಳಲಾಗಿದೆ.

ಹುಬ್ಬಳ್ಳಿ-ಧಾರವಾಡ ಮಹಾನಗರದಲ್ಲಿ ರಸ್ತೆಗಳ ಸುಧಾರಣೆ

2250 - ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ) : ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *1996-97ನೇ ಸಾಲಿನಲ್ಲಿ ಹುಬ್ಬಳ್ಳಿ ಧಾರವಾಡ ಮಹಾನಗರದಲ್ಲಿ ರಸ್ತೆಗಳ ಸುಧಾರಣೆಗಾಗಿ ಎಷ್ಟು ಹಣ ಖರ್ಚು ಮಾಡಲಾಗಿದೆ?*

ಆ) *ಸದರಿ ಅವಧಿಯಲ್ಲಿ ಸುಧಾರಣೆ ಮಾಡಿದ ರಸ್ತೆಗಳು ಯಾವುವು? ವಿವರ ಒದಗಿಸುವುದು*

ಇ) *1997-98 ನೇ ಸಾಲಿನಲ್ಲಿ ರಸ್ತೆ ಸುಧಾರಣೆಗಾಗಿ ನಿಗದಿಪಡಿಸಿದ ಹಣ ಎಷ್ಟು? ಅದಕ್ಕಾಗಿ ಹಣದ ವ್ಯವಸ್ಥೆ ಮಾಡಲಾಗಿದೆಯೇ? ಹಾಗಿದ್ದಲ್ಲಿ ಹಣ ವ್ಯವಸ್ಥೆ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು?*

ಶ್ರೀ ಮೀರಾಜುದ್ದೀನ್ ಪಾಟೀಲ್ (ಪೌರಾಡಳಿತ ರಾಜ್ಯ ಸಚಿವರು) :

ಅ) ರೂ. 1,12,71,802-00

ಆ) ವಿವರಗಳನ್ನು ಅನುಬಂಧದಲ್ಲಿ ಲಗತ್ತಿಸಿದೆ.

ರೂ. 2.70 ಕೋಟಿಗಳನ್ನು ನಿಗದಿಪಡಿಸಲಾಗಿದೆ.